BHIMAPPA SOMAPPA NAVI
Digitally signed by BHIMAPPA SOMAPPA NAVI
DN: c=IN, o=KARNATAKA STATE AKKAMAHADEVI WOMENS UNIVERSITY VIJAYAPURA, ou=NA, 2.5.4.20=db7789db39afe1f3d852b09ea3497499328f50a9eb82c5e3eb9b8da79cde486e, postalCode=586108, st=KARNATAKA, serialNumber=a2019af0af54b531e19e9c7b6fbd664dec1569beb802de3505e28213b85e6333, cn=BHIMAPPA SOMAPPA NAVI
Date: 2023.08.12 15:11:18 +05'30'

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
(ಹಿಂದಿನ ಹೆಸರು "ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ")

Karnataka State Akkamahadevi Women's University, Vijayapura
(Formerly known as "Karnataka State Women's University, Vijayapura")

---

# NAAC II CYCLE – SSR: Criteria 7:

# 7.1.9: Constitutional Obligations

# <u>Celebration of National Festivals</u>

7.1.9 (5A)

Event: Quit Indian chaluvali

Date: 23/11/2017

Dept: Women studies

Resource Person: Dr. Suresh. Kai...

ವಿಜಯ ಕರ್ನಾಟಕ · ದಿನಾಂಕ · 23-11-2017 · ಪುಟ III

# ಹೆಣ್ಣು-ಗಂಡು ತಾರತಮ್ಯ ಇಂದಿಗೂ ಜೀವಂತ

## ಕ್ವಿಟ್ ಇಂಡಿ ಚಳವಳಿ ವಾರ್ಷಿಕೋತ್ಸವ ಉಪನ್ಯಾಸ, ಡಾ.ಸುರೇಶ ಅಭಿಪ್ರಾಯ

■ ವಿಕ ಸುದ್ದಿಲೋಕ ವಿಜಯಪುರ

ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿಯೂ ತೊಡಗಿಸಿಕೊಂಡಿದ್ದಾರೆ. ಹೆಣ್ಣು ಮನಸ್ಸು ಮಾಡಿದರೆ ಸಾಧನೆಯ ಶಿಖರವರನ್ನು ಮುಟ್ಟಬಲ್ಲಳು ಎಂಬುದನ್ನು ಅನೇಕರು ಸಾಬೀತುಪಡಿಸಿದ್ದಾರೆ. ಅಂಥ ಮಹಿಳೆಯರ ಆದರ್ಶಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು ಎಂದು ರಾಷ್ಟ್ರೀಯ ಸೇವಾದಳದ ಅಧ್ಯಕ್ಷ ಡಾ.ಸುರೇಶ ಖೈರನಾರ ಸಲಹೆ ನೀಡಿದರು.

ಅಕ್ಕಮಹಾದೇವಿ ಮಹಿಳಾ ವಿವಿಯ ಮಹಿಳಾ ಅಧ್ಯಯನ ಕೇಂದ್ರ ಮತ್ತು ಗಾಂಧಿ ಅಧ್ಯಯನ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ಕ್ವಿಟ್ ಇಂಡಿಯಾ ಚಳವಳಿ 75ನೇ ವಾರ್ಷಿಕೋತ್ಸವದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಅನೇಕ ಮಹಿಳೆಯರು ಗಣನೀಯ ಪಾತ್ರ ವಹಿಸಿದ್ದಾರೆ. ಆಧುನಿಕ ಯುಗದಲ್ಲೂ ಮಹಿಳೆಯರು ಪುರುಷರಿಗಿಂತ ಒಂದು ಹೆಜ್ಜೆ ಮುಂದೆ ಇದ್ದಾರೆ. ಅನೇಕ ಸವಾಲುಗಳನ್ನು ಎದುರಿಸಲು ಸನ್ನದ್ಧರಾಗಿದ್ದಾರೆ ಎಂದು ತಿಳಿಸಿದರು.

ಯಾವ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ದೊರಕುವುದಿಲ್ಲವೋ ಅಲ್ಲಿಯೂ ಕೂಡಾ ಮಹಿಳೆ ಸಾಧನೆ ಮಾಡಲು ಹಂಬಲಿಸುತ್ತಿದ್ದಾಳೆ. ಆದಾಗ್ಯೂ ಚಿಕ್ಕ ವಯಸ್ಸಿನಿಂದ ಹೆಣ್ಣು-ಗಂಡು ಎಂಬ ಭೇದಭಾವಕ್ಕೆ ಸಿಲುಕಿ ಮಹಿಳೆ ಇಂದಿಗೂ ಒಂದಲ್ಲ ಒಂದು ರೀತಿಯಲ್ಲಿ ತಾರತಮ್ಯ ಎದುರಿಸುತ್ತಿದ್ದಾಳೆ ಎಂದು ವಿಷಾದ ವ್ಯಕ್ತಪಡಿಸಿದರು.

ಮಹಿಳಾ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಡಾ.ಲಕ್ಷ್ಮಿ ದೇವಿ, ವಿಜಯಪುರ ಖಾದಿ ಗ್ರಾಮೋದ್ಯೋಗದ ಅಧ್ಯಕ್ಷ ಬಿ.ಬಿ.ಪಾಟೀಲ, ರಾಷ್ಟ್ರೀಯ ಸೇವಾದಳದ ಸಂಘಟಕ ಸದಾಶಿವ ಮಗದುಮ್, ಕಾರ್ಯದರ್ಶಿ ವಿಲಾಸ ಕಿರೋಟೆ, ಅಪ್ಪಾಸಾಹೇಬ ಯರನಾಳ, ಮಹಿಳಾ ಅಧ್ಯಯನ ಕೇಂದ್ರದ ಮುಖ್ಯಸ್ಥೆ ಪ್ರೊ.ಸುನಂದಮ್ಮ, ವಿವಿಧ ವಿಭಾಗದ ಬೋಧಕ-ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ ಹಮ್ಮಿಕೊಂಡಿದ್ದ ಕ್ವಿಟ್ ಇಂಡಿಯಾ ಚಳವಳಿಯ 75ನೇ ವಾರ್ಷಿಕೋತ್ಸವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೇವಾದಳದ ಅಧ್ಯಕ್ಷ ಡಾ.ಸುರೇಶ ಖೈರನಾರ ಮಾತನಾಡಿದರು.

were present. meet.

Deccan-Herald D/27-1-19-P-2

# Be loyal to Constitution of India, people told

VIJAYPUR: The Indian constitution has assured equality and liberty to all and it is the duty of every Indian to be loyal to the Constitution, said Akka Mahadevi Women's University Vice-Chancellor Sabiha.



Sabiha

Speaking after hoisting the national flag to mark the 70th Republic Day at the university campus, she described India as the nation that is characterised by the concept of 'unity in diversity'. She stated that Republic Day of India is observed to mark the acceptance of the Constitution.

She suggested that every Indian should properly interpret the spirit of the Constitution and inculcate it in their daily lives. She said that it is necessary to conduct debates and discussions to decipher the minute details of the Constitution.

Quoting B R Ambedkar she said that the spirit of the Constitution does not become effective if the governments that rule the nation are not committed to strictly translate the expectations of the Constitution into reality. Pointing to the way the political parties are shadowing the Constitution and the nation, she stated that the overall interest of the nation should be more important than the interests of the political parties.

She suggested that all inactiveness be got rid of and enthusiasm should be inculcated to ensure that the constitutional expectation of being a voice to the oppressed and the women, is made a reality. Deans of faculties, staff members and students were present.

DH News Service

7.1.9(5a)

ಕನ್ನಡ ಪ್ರಭ ೧೬-೮-೨೦೧೯ ಪು-೨


# ಸಂತ್ರಸ್ತರಿಗೆ ವಿಶಿಷ್ಟ ರೀತಿಯಲ್ಲಿ ನೆರವಾಗೋಣ: ಸಬಿಹಾ

• **ಕನ್ನಡಪ್ರಭ ವಾರ್ತೆ** ವಿಜಯಪುರ

ಸ್ವಾತಂತ್ರ್ಯ ಎಂಬುವುದು ಬರೀ ಒಂದು ಗುಂಪಿಗೆ ಮಾತ್ರ ಸೀಮಿತ ಎಂದು ತಿಳಿದುಕೊಳ್ಳುವ ಬದಲು ಸ್ವಾತಂತ್ರ್ಯ ಎಂಬುವುದು ಇಡೀ ಮಾನವ ಸಮಾಜದ ಮಿತಿ ಎಂದು ಅರಿಯುವ ಅವಶ್ಯಕತೆ ಇದೆ. ಇಡಿ ಮನುಕುಲವೂ ಎಂದು ಎಲ್ಲ ನೆಲೆಗಳಲ್ಲಿಯೂ ಸಮೃದ್ಧಿಯನ್ನ ಪಡೆಯುತ್ತದೆಯೋ ಅಂದು ನಮಗೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಂತೆ ಎಂದು ಮಹಿಳಾ ವಿವಿ ಕುಲಪತಿ ಪ್ರೊ. ಸಬಿಹಾ ಅಭಿಪ್ರಾಯಪಟ್ಟರು.

ಅವರು ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಜ್ಞಾನಶಕ್ತಿ ಆವರಣದಲ್ಲಿ ಗುರುವಾರ ಜರುಗಿದ 73ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಎಂಬುವುದು ಬರೀ ಒಂದು ನೆಲೆಯಲ್ಲಿ ನಾವು ಯೋಚಿಸಲಾಗುವುದಿಲ್ಲ. ಹಸಿವು, ಬಡತನ, ಜಾತಿಯತೆ, ನಿರುದ್ಯೋಗ, ಶೋಷಣೆ, ಅಸಮಾನತೆ ಇವೆಲ್ಲವನ್ನು ಸಹ ಹೋಗಲಾಡಿಸಬೇಕಾಗಿದೆ ಅಂದಾಗ ಮಾತ್ರ ನಮಗೆ ಸ್ವಾತಂತ್ರ್ಯತೆಯ ಸಾರ್ಥಕತೆ



ದೊರಕುತ್ತದೆ ಎಂದರು.

ಇನ್ನು ಈ ಸಂದರ್ಭದಲ್ಲಿ ಅನಾವೃಷ್ಟಿ ಉಂಟಾಗುವ ಮೂಲಕ ಸುಮಾರು 10 ವರ್ಷಗಳ ಹಿಂದಿನ ಪರಿಸ್ಥಿತಿ ಮತ್ತೆ ಮರುಕಳಿಸಿದೆ. ಈ ಅತೀವೃಷ್ಟಿ ಮತ್ತು ಅನಾವೃಷ್ಟಿಯಿಂದ ಸಾಕಷ್ಟು ಜನ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ. ಇಂತಹ ಪರಿಸ್ಥಿತಿಗಳು ನಮ್ಮ ಜವಬ್ದಾರಿಯನ್ನು ಹೆಚ್ಚಿಸಿವೆ. ನಾವೆಲ್ಲರೂ ಸಹ ಒಗ್ಗಟ್ಟಿನಿಂದ ಅವರ ನೋವಿಗೆ ಸ್ಪಂದಿಸಬೇಕಿದೆ. ದೈಹಿಕವಾಗಿ ನಮಗೆ ಅವರಿಗಾಗಿ ದುಡಿಯಲು ಆಗಲಿಲ್ಲವೆಂದರೂ ನಮ್ಮ ಹತ್ತಿರ ಇರುವ ಪೆನ್ನು ಎಂಬ ಅಸ್ತ್ರವನ್ನು ಬಳಸಿಕೊಂಡು ನಾವು ಅಭಿವೃದ್ಧಿಪಡಿಸಲು ಪ್ರಯತ್ನಿಸೋಣ. ನಮಗೆ ಈ ವಿಷಯದಲ್ಲಿ ಪ್ರಚಾರದ ಹಂಗು ಬೇಡ. ವಿವಿಯ ವಿದ್ಯಾರ್ಥಿನಿಯರು, ಸಿಬ್ಬಂದಿ ಎಲ್ಲರೂ ಸೇರಿ ಒಂದು ವಿಶಿಷ್ಟ ರೀತಿಯಲ್ಲಿ ನಮ್ಮ ಕೈಲಾದಷ್ಟು ಕೆಲಸ ಮಾಡೋಣ ಎಂದರು.

ಅತಿಥಿಯಾಗಿ ಆಗಮಿಸಿದ್ದ ಹಾವೇರಿಯ ಶಿಲ್ಪಕಲಾ ಕುಟೀರ ಸಂಸ್ಥಾಪಕ ಡಾ.ಟಿ.ಬಿ. ಸೊಲಬಕ್ಕನವರ್ ಮಾತನಾಡಿದರು. ಈ ಸಂದರ್ಭದಲ್ಲಿ ಮಹಿಳಾ ವಿವಿ ಕುಲಸಚಿವರಾದ ಪ್ರೊ.ಆರ್.ಸುನಂದಮ್ಮ, ದೈಹಿಕ ಶಿಕ್ಷಣ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಜ್ಯೋತಿ ಉಪಾಧ್ಯಾಯ, ವಿವಿಧ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು, ವಿದ್ಯಾರ್ಥಿನಿಯರು ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಂಗೀತ ವಿಭಾಗದ ವಿದ್ಯಾರ್ಥಿನಿಯರು ದೇಶಭಕ್ತಿ ಗೀತೆಗಳನ್ನು ಹಾಡಿದರು. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಡಾ.ಓಂಕಾರಗೌಡ ಕಾಕಡೆ ಅತಿಥಿ ಪರಿಚಯ ಮಾಡಿಕೊಟ್ಟರು, ಶಿಕ್ಷಣ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ವಿಷ್ಣು ಶಿಂದೆ ನಿರೂಪಿಸಿದರು.

Event : 73rd Independence day

Date : 16/8/2019 kannada praba page No: 2

Dep.

Reso. person : Dr T B Solabakkanavar.

201.9 (SA)

ವಿಜಯವಾಣಿ ದಿ. 1/11/19, ಪು - II B

## ಪ್ರಾಧ್ಯಾಪಕ ಡಾ.ವಿಷ್ಣು ಶಿಂಧೆ ಹೇಳಿಕೆ । ರಾಷ್ಟ್ರೀಯ ಏಕತಾ ದಿನಾಚರಣೆ

# ಏಕೀಕರಣದಲ್ಲಿ ಪಟೇಲ್ ಸಾಧನೆ ಶ್ಲಾಘನಾರ್ಹ

■ ವಿಜಯವಾಣಿ ಸುದ್ದಿಜಾಲ ವಿಜಯಪುರ

ನಮ್ಮ ದೇಶವು ವಿವಿಧತೆಯಲ್ಲಿ ಏಕತೆ ಹೊಂದಿದೆ ಎಂದು ಅಕ್ಕಮಹಾದೇವಿ ಮಹಿಳಾ ವಿವಿಯ ಶಿಕ್ಷಣ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ವಿಷ್ಣು ಶಿಂಧೆ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿವಿ ಹಾಗೂ ರಾಷ್ಟ್ರೀಯ ಸೇವಾ ಯೋಜನಾ ಕೋಶದಿಂದ ವಿವಿಯ ಶಿಕ್ಷಣ ವಿಭಾಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಏಕತಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

**ವಿದ್ಯಾರ್ಥಿನಿಯರಿಗೆ ಪ್ರಮಾಣವಚನ ಬೋಧನೆ**

ಶಿಕ್ಷಣ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಉದಯಕುಮಾರ ಕುಲಕರ್ಣಿ ಮಾತನಾಡಿ, 'ಏಕ ದೇಶ ಮಹಾನ್ ದೇಶ' ಎಂದು ಪಟೇಲರು ರಾಷ್ಟ್ರದ ಏಕೀಕರಣದಲ್ಲಿ ಮಾಡಿದ ಕಾರ್ಯ ಶ್ಲಾಘನಾರ್ಹವಾದುದು ಎಂದು ಹೇಳಿದರು.



ವಿಜಯಪುರ ನಗರದ ಅಕ್ಕಮಹಾದೇವಿ ಮವಿವಿಯಲ್ಲಿ ನಡೆದ ರಾಷ್ಟ್ರೀಯ ಏಕತಾ ದಿನಾಚರಣೆಯಲ್ಲಿ ಬೋಧಕರು ವಿದ್ಯಾರ್ಥಿನಿಯರಿಗೆ ಪ್ರಮಾಣವಚನ ಬೋಧಿಸಿದರು.

ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಅಶೋಕ ಸುರಪುರ ಮಾತನಾಡಿದರು. ರಾಷ್ಟ್ರೀಯ ಸೇವಾ ಯೋಜನಾ ಕೋಶದ ಸಂಯೋಜಕ ಪ್ರೊ.ಬಸವರಾಜ ಲಕ್ಕಣ್ಣವರ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಪ್ರಾಧ್ಯಾಪಕರಾದ ಡಾ.ಪ್ರಕಾಶ ಬಡಿಗೇರ, ಪ್ರಕಾಶ ಸಣ್ಣಕ್ಕನವರ, ಡಾ.ಕಲಾವತಿ ಕಾಂಬಳೆ, ಶಿಕ್ಷಣ ವಿಭಾಗ ಹಾಗೂ ಬಿಎಡ್ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

**ಸರ್ಕಾರಿ ಪ್ರಥಮ ದರ್ಜೆ ಕಾಲೇಜ್:** ದೇಶ ಕಂಡ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಹಾಗೂ ರಾಷ್ಟ್ರದ ಏಕತೆಗಾಗಿ ಶ್ರಮಿಸಿದ ಸರ್ದಾರ್ ವಲ್ಲಭ್‌ಭಾಯಿ ಪಟೇಲ್‌ರ ಜೀವನ, ತತ್ವಾದರ್ಶಗಳು ನಮಗೆ ದಾರಿದೀಪವಾಗಬೇಕೆಂದು ಪ್ರೊ.ಎಂ.ಎಸ್. ಖೊದ್ನಾಪುರ ಹೇಳಿದರು. ನಗರದ ನವಬಾಗ್‌ದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ಸಹಯೋಗದಡಿ ವಲ್ಲಭ್‌ಭಾಯಿ ಪಟೇಲ್‌ರ ಜನ್ಮದಿನ ಅಂಗವಾಗಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಏಕತಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರೊ.ಎಚ್.ಎ. ಕಲಾದಗಿ ಅಧ್ಯಕ್ಷತೆ ವಹಿಸಿದ್ದರು. ಡಾ. ಬಿ.ಎಂ. ಕೊರಬು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಎನ್‌ಎಸ್‌ಎಸ್ ಘಟಕ-2ರ ಕಾರ್ಯಕ್ರಮಾಧಿಕಾರಿ ಡಾ.ಚಂದ್ರಕಾಂತ ಬಿ. ನಿರೂಪಿಸಿದರು. ಪ್ರೊ.ಬಿ.ಎನ್.ಶಾಡದಳ್ಳಿ ವಂದಿಸಿದರು. ಪ್ರೊ.ಎ.ಎಸ್.ಕುಲಕರ್ಣಿ, ಜಗದೀಶ ಪತಂಗೆ, ಎಸ್.ಎಸ್. ಗಣಿ, ಎಂ. ಎಸ್. ಅಲಬಾಳ, ಬೋಧಕ-ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿ- ವಿದ್ಯಾರ್ಥಿನಿಯರು ಇದ್ದರು.

Event : → celebration of Integration Day

Date : 1/11/2019, Vijayavani, page : II B

Department : Education

Resource person : ~~Vishnu~~ Dr. Vishnu Shinde.